ಈ ಅಧಿವೇಶನದಲ್ಲಿ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ, ಆ ಸಂದರ್ಭದಲ್ಲಿ ಈ ವಿಷಯವೆಲ್ಲವನ್ನು ಸುದೀರ್ಘವಾಗಿ ಚರ್ಚೆ ಮಾಡಬಹುದು. ನೀವು ಖಾಸಗಿಯಾಗಿ ಚರ್ಚೆ ಮಾಡುವುದನ್ನು ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಉಪಯೋಗ ಮಾಡಬಹುದು. ಆದ್ದರಿಂದ ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಈ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ. ಮೊದಲು ನೋಟೀಸ್ ಕಳುಹಿಸಿ, ನಾನು ಮೆರಿಟ್ ಮೇಲೆ ತೀರ್ಮಾನ ಮಾಡುತ್ತೇನೆಂದು ಹೇಳಿದೆನಷ್ಟೆ.

ಆನೇಕಲ್‌ನಲ್ಲಿ ಮೊರಾರ್ಜಿ ದೇಸಾಯಿ ಶಾಲೆ

259 (2662) : **ಶ್ರೀ ನಾರಾಯಣಸ್ವಾಮಿ. ಎ. (ಆನೇಕಲ್) :** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಆನೇಕಲ್ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ಶಾಲೆ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಶಾಲೆಯಲ್ಲಿನ ಅವ್ಯವಸ್ಥೆ, ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಶಾಲೆಗೆ ಶಾಶ್ವತ ಕಟ್ಟಡ ನಿರ್ಮಿಸಲು ಪ್ರಸಕ್ತವಾಗಿರುವ ಭೂಮಂಜೂರಾತಿಗೆ ಸರ್ಕಾರದ ವಿಳಂಬವೇಕೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಬಂದಿರುತ್ತದೆ

(ಆ) ಬಂದಿರುವುದಿಲ್ಲ.

(ಇ) ಈ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ಯಮರೆ ಗ್ರಾಮದ ಸರ್ವೆ ನಂ. 135 ರಲ್ಲಿ 21.21 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕುಂದಾಯ ಇಲಾಖೆಯನ್ನು ಕೋರಲಾಗಿದ್ದು, ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಉತ್ತರವನ್ನು ಒದಗಿಸಿದ್ದಾರೆ. ಆ ಉತ್ತರದಲ್ಲಿ ನನ್ನ ಮೊದಲನೇ ಪ್ರಶ್ನೆಗೆ 'ಬಂದಿರುತ್ತದೆ' ಎಂದು ಹಾಗೂ ಎರಡನೇ ಪ್ರಶ್ನೆಗೆ 'ಬಂದಿರುವುದಿಲ್ಲ' ವೆಂದು ಉತ್ತರ ಕೊಟ್ಟಿದ್ದಾರೆ. ನನಗೊಂದು ಜಿಜ್ಞಾಸೆ ಉಂಟಾಗಿದೆ. ಏನೆಂದರೆ, ಶಾಸಕರು ಪ್ರಶ್ನೆಯನ್ನು ಕಳುಹಿಸಿಕೊಟ್ಟಾಗ ಸರ್ಕಾರಿ ಅಧಿಕಾರಿಗಳ ಉತ್ತರ ಹೇಗಿರುತ್ತದೆಂದರೆ, ಹೌದಪ್ಪ ಎಂದರೆ ಹೌದಪ್ಪ, ಇಲ್ಲಪ್ಪ ಎಂದರೆ ಇಲ್ಲಪ್ಪ ಎಂದು ಅವರು ಉತ್ತರವನ್ನು ಕೊಡುವುದಾದರೆ, ಶಾಸಕರು ತಮ್ಮ ಕಳಕಳಿಯನ್ನು ಯಾವ ರೀತಿ ವ್ಯಕ್ತಪಡಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಹಿರಿಯ ಸದಸ್ಯರಾದಂಥ ದಿವಂಗತ ವೈ. ರಾಮಕೃಷ್ಣರವರ ಕಾಲದಲ್ಲಿ ಈ ಶಾಲೆ ಪ್ರಾರಂಭವಾಯಿತು. ಈ ಶಾಲೆಗೆ ಜಿಲ್ಲಾ ಪಂಚಾಯತಿಯ ಸ್ಥಾಯಿ ಸಮಿತಿಯವರು

ಭೇಟಿ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಈ ಶಾಲೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ನೇಮಕವಾಗಿರುವ ವಾರ್ಡನ್ ಇರಲಿಲ್ಲ. ಅಲ್ಲಿನ ಮಕ್ಕಳ ಆರೋಗ್ಯ ಹದಗೆಟ್ಟಿದ್ದರಿಂದ ಸಮಿತಿಯ ಸದಸ್ಯರು ಆ ಸಮಯದಲ್ಲಿ ಡಾಕ್ಟರನ್ನು ಕರೆಸಿ ಮಕ್ಕಳಿಗೆ ಚಿಕಿತ್ಸೆಯನ್ನು ಕೊಡಿಸಿದ್ದಾರೆ. ವಾರ್ಡನ್ ಬಗ್ಗೆ ಅಲ್ಲಿ ಎಲ್ಲಾ ವಿದ್ಯಾರ್ಥಿಗಳು ದೂರನ್ನು ಕೊಟ್ಟಿದ್ದಾರೆ. ಈ ದೂರಿನ ಬಗ್ಗೆ ಸ್ಥಾಯಿ ಸಮಿತಿಯವರು ಜಿಲ್ಲಾ ಪಂಚಾಯತಿಯಲ್ಲಿ ಚರ್ಚೆ ಮಾಡಿ ಆತನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದಾರೆ. ನಂತರ ಇದು ಸರ್ಕಾರಕ್ಕೆ ಬಂದಾಗ ಮಾನ್ಯ ಮಂತ್ರಿಗಳು ಆ ವಾರ್ಡನ್‌ನ್ನು ವರ್ಗಾವಣೆ ಮಾಡಿದರು. ವರ್ಗಾವಣೆ ಮಾಡಿ 15 ದಿವಸದೊಳಗಾಗಿ ಈತನನ್ನು ಡಿ. ಎಸ್. ಡಬ್ಲ್ಯೂ. ಆಗಿರತಕ್ಕಂಥ ಒಬ್ಬ ಅಧಿಕಾರಿ ಅದೇ ಜಾಗಕ್ಕೆ ರೀಟೈನ್ ಮಾಡಿದ್ದಾರೆ. ಏಕೆ ರೀಟೈನ್ ಮಾಡಿದ್ದೀರೆಂದು ಮಾನ್ಯ ಮಂತ್ರಿಗಳು ಕೇಳಿದ್ದಕ್ಕೆ, ಅವರನ್ನು ನಿಯೋಜನೆ ಮೇರೆಗೆ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಅಧ್ಯಕ್ಷರು : ಇಲಾಖಾ ಬೇಡಿಕೆ ಮೇರೆಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಈ ವಿಷಯವೆಲ್ಲವನ್ನು ನೀವು ಪ್ರಸ್ತಾಪ ಮಾಡಿ. ಆದ್ದರಿಂದ ಈಗ ನಿಮ್ಮ ಪ್ರಶ್ನೆಗೆ ಮಾತ್ರ ಉತ್ತರ ಕೇಳಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನೊಬ್ಬ ಪರಿಶಿಷ್ಟ ಜನಾಂಗದ ಶಾಸಕನಾಗಿದ್ದು, ನಾನು ಕೂಡ ಹಿಂದೆ ಈ ಹಾಸ್ಟೆಲ್‌ನಲ್ಲಿದ್ದೆ. ಆದ್ದರಿಂದ ಇದರ ಅನುಭವ ನನಗೆ ಇದೆ. ಒಳ್ಳೆಯ ವಿದ್ಯಾಭ್ಯಾಸ ಮತ್ತು ಸವಲತ್ತುಗಳು ಸಿಗುವುದರ ಜೊತೆಗೆ ಒಪ್ಪತ್ತಿನ ಊಟ ಸಿಗುತ್ತದೆ, ಇದರಿಂದ ಜೀವನ ಮಾಡಬಹುದೆಂದು ವಿದ್ಯಾರ್ಥಿಗಳು ಇವತ್ತಿನ ದಿವಸ ಅಲ್ಲಿಗೆ ಹೋಗುತ್ತಾರೆ. ಸಮಿತಿ ಒಂದು ವರದಿ ಕೊಟ್ಟಿದ್ದರೂ ಸರ್ಕಾರ 'ಕೊಟ್ಟಿಲ್ಲ' ವೆಂದು ಉತ್ತರ ಕೊಟ್ಟರೆ ನಾವು ಏನೆಂದು ಕೇಳಬೇಕು ನೀವೇ ಹೇಳಿ? ಆದ್ದರಿಂದ ಸರ್ಕಾರದಲ್ಲಿ ವರದಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಿ ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಶಾಲೆಯನ್ನು ಒಂದು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಆದ್ದರಿಂದ ಈ ವಿಷಯದ ಬಗ್ಗೆ ವರದಿ ಬಂದಿದೆಯೋ ಅಥವಾ ಇಲ್ಲವೊ ಎಂಬುದನ್ನು ಹೇಳಬೇಕು. ಏಕೆಂದರೆ ನನಗಂತು ವರದಿ ಬಂದಿದೆ. ಈತನ ಮೇಲೆ ಸರ್ಕಾರ ಕ್ರಮ ಕೈಗೊಂಡರೂ ಸಹ ಅಲ್ಲಿನ ಡಿಎಸ್‌ಡಬ್ಲ್ಯೂ ರವರು ಸರ್ವಾಧಿಕಾರಿ ಎನ್ನುವಂತ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತನ್ನ ನಿಲುವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಮಟ್ಟದಲ್ಲಿ ಅಂದರೆ ವಿಧಾನ ಸೌಧದ ಮಟ್ಟದಲ್ಲಿ ಆ ವರದಿ ಬಂದಿಲ್ಲವೆಂದು ನಾನು ಹೇಳಿದನಷ್ಟೆ. ಇದು ನಿರ್ದೇಶಕರ ಮಟ್ಟಕ್ಕೆ ಬಂದಿದ್ದರೆ ನಾನು ಇನ್ನೊಂದು ಸಾರಿ ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಆ ಸ್ಥಳಕ್ಕೆ ಭೇಟಿ ಕೊಟ್ಟು, ಅಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದು ಯಾರ ಮೇಲಾದರೂ ಗುರುತರವಾದ ಅಪಾದನೆ ಕಂಡು ಬಂದರೆ ಅವರ ಮೇಲೆ ಸರ್ಕಾರ ಖಂಡಿತವಾಗಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತದೆ. ಇದರ ಬಗ್ಗೆ ಅನುಮಾನ ಪಡುವುದು ಬೇಡ. ಈ ವರದಿ ನಮಗೆ ಇನ್ನೂ ಬಂದಿಲ್ಲ, ಇದರ ಬಗ್ಗೆ ನಾನು ಮತ್ತೆ ಪರಿಶೀಲನೆ

ಮಾಡುತ್ತೇನೆ. ಒಂದು ವೇಳೆ ಜಿಲ್ಲಾ ಪಂಚಾಯತಿಗೆ ಬಂದಿದ್ದು, ಅವರು ನನ್ನ ಕಚೇರಿಗೆ ಏಕೆ ಕಳುಹಿಸಲಿಲ್ಲವೆಂದು ಕಾರಣವನ್ನು ಕೇಳಿ ಅವರಿಂದ ಆದಷ್ಟು ಬೇಗ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ : ಜಿಲ್ಲಾ ಪಂಚಾಯತಿಯ ನಿಯಂತ್ರಣ ಸರ್ಕಾರದ ಮಟ್ಟದಲ್ಲಿ ಇಲ್ಲವೆಂದರೆ ನನಗೆ ಬಹಳ ನೋವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ನನ್ನ ಕಚೇರಿಗೆ ಇನ್ನೂ ವರದಿ ಬಂದಿಲ್ಲ. ಆದ್ದರಿಂದ ಆದಷ್ಟು ಬೇಗ ವರದಿ ತರಿಸಿಕೊಳ್ಳುತ್ತೇನೆಂದು ಹೇಳುತ್ತಿದ್ದೇನಲ್ಲ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಸಮಂಜಸವಾದ ಉತ್ತರವನ್ನು ಕೊಡುತ್ತಿಲ್ಲ. ನನ್ನ ಕ್ಷೇತ್ರ ಬೆಂಗಳೂರಿನಿಂದ ಸುಮಾರು 600 ರಿಂದ 800 ಕಿ. ಮೀ. ದೂರದಲ್ಲೇನೂ ಇಲ್ಲ; ಕೇವಲ 35 ಕಿ. ಮೀ ದೂರದಲ್ಲಿದೆ. ನನ್ನ ಕ್ಷೇತ್ರಕ್ಕೆ ದೂರವಾಣಿ ವ್ಯವಸ್ಥೆ ಇಲ್ಲವೆಂದು ಹೇಳುತ್ತಿಲ್ಲ. ವಿಧಾನ ಸೌಧದ ಪಕ್ಕದಲ್ಲಿರುವಂಥ ನಿಮ್ಮ ಅಧಿಕಾರಿಗಳ ಕಛೇರಿಯಿಂದ ವರದಿಯನ್ನು ತರಿಸುವುದಕ್ಕೆ ನಿಮಗೆ ಆಗಿಲ್ಲವೆಂದರೆ ಇನ್ನು ಎಲ್ಲಿಂದ ತರಿಸುವುದಕ್ಕಾಗುತ್ತದೆ ಎಂಬುದನ್ನು ನೀವೇ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಈಗಾಗಲೇ ಹೇಳಿದ್ದೇನೆ. ಆದರೆ ಅವರು ಮತ್ತೆ ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಈ ಶಾಲೆಯಲ್ಲಿ ಆಗಿರುವ ಅವ್ಯವಸ್ಥೆ ಮತ್ತು ಅವ್ಯವಹಾರದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಕ್ಕೆ ಮಾನ್ಯ ಸದಸ್ಯರು ಈ ಶಾಲೆಯಲ್ಲಿ ಆಗುತ್ತಿರುವ ಅವ್ಯವಹಾರಗಳ ಬಗ್ಗೆ ಪೂರ್ಣವಾದ ವಿವರವನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರು ಹೇಳಿದ ಮೇಲೆ ಅದನ್ನು ಹಾಗೆಯೇ ಬಿಡುವುದಿಲ್ಲ, ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ : ಈ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಜಮೀನು ಮಂಜೂರಾತಿ ಆಗಿದೆಯೇ ಎಂದು ನಾನು ಕೇಳಿದಂಥ ಪ್ರಶ್ನೆಗೆ ಸರ್ಕಾರ 'ನಿರೀಕ್ಷಿಸುತ್ತಿದೆ' ಎಂದು ಉತ್ತರ ಕೊಟ್ಟಿದ್ದಾರೆ. ನಾನು ಏಕೆ ಪ್ರಶ್ನೆ ಕೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಈ ಶಾಲೆ 20X30 ಅಡಿ ವಿಸ್ತೀರ್ಣವುಳ್ಳ ಒಂದು ಬಾಡಿಗೆ ಕಟ್ಟಡದಲ್ಲಿದ್ದು, ಇಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಇರುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಾವೇ ನಿರ್ಧರಿಸಬೇಕು? ಆದ್ದರಿಂದ ಎಷ್ಟು ಬೇಗ ಭೂಮಂಜೂರಾತಿ ಮಾಡಿಸಿಕೊಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಷಯ ಸರ್ಕಾರದ ಮಟ್ಟದಲ್ಲಿದೆ. ಈ ಶಾಲೆಗೆ ಬೇಕಾದಷ್ಟು ಜಮೀನನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ. ರಾಜ್ಯದಲ್ಲಿ ಇದೊಂದೇ

ಅಲ್ಲದೆ ಒಟ್ಟು 70 ವಸತಿ ಶಾಲೆಗಳಿಗೆ ಕಟ್ಟಡದ ಅವಶ್ಯಕತೆ ಇದೆ. ಆದ್ದರಿಂದ ಇದಕ್ಕೊಂದು ಸೊಸೈಟಿ ಮಾಡಿ ರಿಜಿಸ್ಟರ್ ಮಾಡಲಾಗಿದ್ದು ಮತ್ತು ಹುಟ್ಕೋದಿಂದ ಸಾಲ ತೆಗೆದುಕೊಂಡು ಎಲ್ಲಾ ವಸತಿ ಶಾಲೆಗಳಿಗೆ ಕಟ್ಟಡ ಕಟ್ಟಿಸಿಕೊಡತಕ್ಕಂಥ ಒಂದು ತೀರ್ಮಾನವನ್ನು ಸರ್ಕಾರ ಮಾಡಿದೆ. ನನಗೂ ಸಹ ಇದರ ಬಗ್ಗೆ ತುಂಬಾ ಆಸಕ್ತಿ ಇದೆ. ಏಕೆಂದರೆ ನಾನು ಕೂಡ ಅನೇಕ ಕಡೆ ಇಂಥ ಶಾಲೆಗಳನ್ನು ನೋಡಿದ್ದೇನೆ. ಈ ಶಾಲೆಗಳಿಗೆ ಅನುಕೂಲಕರವಾದಂಥ ಸ್ಥಿತಿಗತಿಗಳು ಇಲ್ಲದೇ ಇರುವುದರಿಂದ ಇವುಗಳನ್ನು ವಸತಿ ಶಾಲೆಗೆಂದು ಯಾರು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ, ಇದಕ್ಕೊಂದು ಕಾಯಕಲ್ಪ ಮಾಡದೇ ಹೋದರೆ ಯಾರಿಗೂ ಸಹ ಗೌರವ ಬರುವುದಿಲ್ಲ. ಆದ್ದರಿಂದ ಆದಷ್ಟು ಬೇಗ ಕಟ್ಟಡ ಕಟ್ಟಿಸಿಕೊಡುವಂಥ ನಿಟ್ಟಿನಲ್ಲಿ ನಾನು ಕೆಲಸ ಮಾಡಿಸುತ್ತೇನೆಂದು ಈ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ದೊಡ್ಡ ಬಳ್ಳಾಪುರದಲ್ಲಿರುವ ಕೈಗಾರಿಕೆಗಳ ಕುರಿತು.

261 (2482) : **ಶ್ರೀ ಕೃಷ್ಣಪ್ಪ. ಎ. (ದೊಡ್ಡಬಳ್ಳಾಪುರ)** : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರ ಕೈಗಾರಿಕಾ ವಸಾಹತುವಿನಲ್ಲಿ ಒಟ್ಟು ಎಷ್ಟು ಕೈಗಾರಿಕೆಗಳು ಸ್ಥಾಪಿತಗೊಂಡಿವೆ; (ಪೂರ್ಣ ವಿವರಗಳನ್ನು ನೀಡುವುದು) ಅವುಗಳಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ; ಕಾರಣಗಳೇನು?

(ಆ) ದೊಡ್ಡಬಳ್ಳಾಪುರದಲ್ಲಿ ನಿರ್ಮಾಣಗೊಂಡಿರುವ ಬೀರ್ಸಾ ಸಿಮೆಂಟ್ ಪ್ಯಾಕಿಂಗ್ ಫ್ಯಾಕ್ಟರಿಗೆ ಸರ್ಕಾರ ಆರ್ಥಿಕ ಸೌಲಭ್ಯ ಒದಗಿಸಿದೆಯೇ? (ತಿಳಿಸುವುದು)

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) ದೊಡ್ಡಬಳ್ಳಾಪುರ ಕೈಗಾರಿಕಾ ವಸಾಹತುವಿನಲ್ಲಿ ಕೆಎಸ್ಎಸ್ಐಡಿಸಿ ರವರು 104 ಮಳಿಗೆಗಳನ್ನು ನಿರ್ಮಿಸಿದ್ದು, 98 ಮಳಿಗೆಗಳನ್ನು ಹಂಚಿಕೆ ಮಾಡಿರುತ್ತಾರೆ. 6 ಮಳಿಗೆಗಳು ಖಾಲಿ ಇವೆ. ಹಂಚಿಕೆ ಮಾಡಲಾಗಿರುವ 98 ಮಳಿಗೆಗಳಲ್ಲಿ 8 ಮಳಿಗೆಗಳನ್ನು ಕೆಎಸ್ಎಸ್ಐಡಿಸಿ ರವರು ಹಣ ಪಾವತಿಸದಿರುವುದರಿಂದ ಬೀಗ ಮುದ್ರೆ ಹಾಕಿರುತ್ತಾರೆ. 104 ಮಳಿಗೆಗಳಲ್ಲಿ 'ಎ' ಮಾದರಿ 10, 'ಬಿ' ಮಾದರಿ 42, 'ಸಿ' ಮಾದರಿ 36 ಮತ್ತು 'ಡಿ' ಮಾದರಿ 16 ಇರುತ್ತದೆ. ನಡೆಯುತ್ತಿರುವ ಘಟಕಗಳ ಪೈಕಿ 22 ಘಟಕಗಳು ಪಾಲುದಾರಿಕೆ ತೊಂದರೆ, ವಿದ್ಯುತ್ ತೊಂದರೆ ಹಣಕಾಸಿನ ತೊಂದರೆ, ಆರ್ಥಿಕ ಹಿನ್ನೆಡೆ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಇತರೆ ಹಣಕಾಸಿನ ಮರುಪಾವತಿ ತೊಂದರೆಗಳಿಂದ ರೋಗಗ್ರಸ್ತವಾಗಿರುತ್ತವೆ. ಕೈಗಾರಿಕೆಗಳು ಮುಚ್ಚಲು ಕಾರಣಗಳೆಂದರೆ;

1. ಆರ್ಥಿಕ ಹಿನ್ನೆಡೆ
2. ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಕೊರತೆ
3. ಅಗತ್ಯ ದುಡಿಮೆ ಬಂಡವಾಳದ ಕೊರತೆ
4. ವಿದ್ಯುತ್ ತೊಂದರೆ - ಆಗಿಂದಾಗ್ಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ